## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1823** |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 24.03.2020 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ, ಇಲಾಖಾ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೆಂಗಳೂರಿನ ಪರಿಮಳನಗರದ (ವಾರ್ಡ್ ನಂ.43) 9ನೇ ಮುಖ್ಯರಸ್ತೆಯಲ್ಲಿರುವ ಮೆ:ಯಶಸ್ವಿನಿ ಗ್ಯಾಸ್ ಗೋದಾಮಿನಿಂದ ಸುತ್ತಮುತ್ತಲಿನ ನಾಗರೀಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ. |
| (ಆ) | ಸದರಿ ಗ್ಯಾಸ್ ಗೋದಾಮನ್ನು ಸ್ಥಳಾಂತರಿಸುವ ಬಗ್ಗೆ ಸುತ್ತಮುತ್ತಲಿನ ನಾಗರೀಕರು...... ಸರ್ಕಾರಕ್ಕೆ ದೂರು ನೀಡಿದ್ದಾರೆಯೇ: | ದಿನಾಂಕ:09.03.2017ರಂದು ಉಪ ನಿರ್ದೇಶಕರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಪಶ್ಚಿಮ ವಲಯ, ಬೆಂಗಳೂರು ಇವರಿಗೆ ಲಿಖಿತ ದೂರನ್ನು ಸಲ್ಲಿಸಿರುತ್ತಾರೆ. |
| (ಇ) | ಪಶ್ಚಿಮ ವಲಯದ ಉಪನಿರ್ದೇಶಕರು ದಿನಾಂಕ:23.03.2017ರಂದು ಗೋದಾಮನ್ನು ಕೂಡಲೇ ಬೇರೆ ಕಡೆ ವರ್ಗಾಯಿಸುವುದು ಸೂಕ್ತವೆಂದು ವರದಿ ನೀಡಿರುವುದು ನಿಜವೇ; ಯಾವ ದಿನಾಂಕದಂದು ವರದಿ ನೀಡಿದ್ದಾರೆ; ವರದಿಯ ಪ್ರತಿ ನೀಡುವುದು; | ಹೌದು, <br> ದಿನಾಂಕ:20.03.2017ರಂದು ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಇವರಿಗೆ ವರದಿಯನ್ನು ನೀಡಿದ್ದಾರೆ. (ಪ್ರತಿಯನ್ನು ಲಗತ್ತಿಸಿದೆ) |
| (ಈ) | ಸದರಿ ಗೋದಾಮನ್ನು ತಕ್ಷಣವೇ ಸ್ಥಳಾಂತರಿಸಬೇಕೆಂದು ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ತಹಶೀಲ್ದಾರ್‌ರಿಗೆ ಪತ್ರ ಬರೆದಿರುವುದು ನಿಜವೇ; ಇದ್ದಲ್ಲಿ, ಯಾವ ದಿನಾಂಕದಂದು ಪತ್ರ ಬರೆದಿದ್ದಾರೆ; (ಪತ್ರದ ಪ್ರತಿ ಲಗತ್ತಿಸುವುದು) | ಸದರಿ ಗೋದಾಮನ್ನು ಸ್ಥಳಾಂತರಿಸಲು ಸೂಕ್ತ ಕ್ರಮವಹಿಸುವಂತೆ ಕೋರಿ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಪತ್ರ ಸಂಖ್ಯೆ: ಜಿಅ(ನ)ಆ:ಎಲ್‌ಸಿಕ್ಯೂ/2998:12/2017-18 ದಿನಾಂಕ:02.01.2018ರಲ್ಲಿ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ಇವರಿಗೆ ಪತ್ರ ಬರೆದಿರುತ್ತಾರೆ. (ಪ್ರತಿ ಲಗತ್ತಿಸಿದೆ) |

...2

| | | |
|---|---|---|
| (ಉ) | ಜನನಿಬಿಡ ಪ್ರದೇಶದಲ್ಲಿ ಗ್ಯಾಸ್ ಅವಘಡ ತಪ್ಪಿಸುವ ದಿಸೆಯಲ್ಲಿ ಗೋದಾಮು ಸ್ಥಳಾಂತರಿಸಲು ಈವರೆಗೂ ಕೈಗೊಂಡಿರುವ ಕ್ರಮಗಳೇನು; ಯಾವ ನಿಗದಿತ ದಿನಾಂಕದೊಳಗೆ ಸ್ಥಳಾಂತರಿಸಿ ನಾಗರೀಕರನ್ನು ಅವಘಡದಿಂದ ರಕ್ಷಿಸಲಾಗುವುದು? | ಗೋದಾಮವನ್ನು ಸ್ಥಳಾಂತರಿಸಲು ಆಡಳಿತಾತ್ಮಕವಾಗಿ ಕ್ರಮ ಕೈಗೊಂಡಿದ್ದು, ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಪಿಟಿಷನ್ ಸಂಖ್ಯೆ: 1205/2019 ಅನ್ನು ಗೋದಾಮಿನ ಮಾಲೀಕರಾದ ಶ್ರೀಮತಿ ಉಪಾದೇವಿರವರು ದಾಖಲಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ನೀಡಿರುವ ತಡೆಯಾಜ್ಞೆಯು ಜಾರಿಯಲ್ಲಿರುತ್ತದೆ. |

**ಸಂಖ್ಯೆ:** ಆನಾಸ 23 ಎಫ್‌ಪಿಪಿ 2020 (ಇ-ಆಫೀಸ್)

(ಕೆ.ಗೋಪಾಲಯ್ಯ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ
ಕಾನೂನು ಮಾಪನಶಾಸ್ತ್ರ, ಇಲಾಖಾ ಸಚಿವರು.

LCQ 1823

# ಕರ್ನಾಟಕ ಸರ್ಕಾರ

...ಉನಿ(ಪ)ಗ್ಯಾ.ಏ:16/12-13

ಉಪ ನಿರ್ದೇಶಕರ ಕಛೇರಿ,
ಆಹಾರ ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ,
ಪಶ್ಚಿಮ ವಲಯ, ಬೆಂಗಳೂರು.
ದಿನಾಂಕ: 20-03-2017

ಗೆ,
ಅಪರ ನಿರ್ದೇಶಕರು (ಸಂ.ವಿ),
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ,
ಬೆಂಗಳೂರು.

ಮಾನ್ಯರೇ,

ವಿಷಯ: ಮೆ॥ ಯಶಸ್ವಿನಿ ಗ್ಯಾಸ್ ಏಜೆನ್ಸಿ ಗೋದಾಮು ಜನವಸತಿ ಪ್ರದೇಶದಲ್ಲಿರುವ ಬಗ್ಗೆ.
ಉಲ್ಲೇಖ: 1) ನಂದಿನಿ ಬಡಾವಣೆ, ಪರಿಮಳನಗರದ ನಿವಾಸಿಗಳ ಮನವಿ ಪತ್ರ
ದಿನಾಂಕ: 09-03-2017.
2) ಆಹಾರ ನಿರೀಕ್ಷಕರು, ವಿಭಾಗ-01 ರವರ ವರದಿ ಸಂಖ್ಯೆ:
ಆನಿ/ಪಿಆರ್:210/16-17, ದಿನಾಂಕ: 20-03-2017.

20/3/17

*****

ವಿಷಯಕ್ಕೆ ಸಂಬಂಧಿಸಿದಂತೆ, ಮೆ॥ ಯಶಸ್ವಿನಿ ಗ್ಯಾಸ್ ಏಜೆನ್ಸಿ ಗೋದಾಮು ಜನವಸತಿ ಪ್ರದೇಶದಲ್ಲಿರುವ ಬಗ್ಗೆ ನೀಡಿದ್ದ, ಉಲ್ಲೇಖ(1)ರ ದೂರು ಅರ್ಜಿಯನ್ನು ಈ ಕಛೇರಿಯ ಸಂಬಂಧಪಟ್ಟ ನಿರೀಕ್ಷಕರು ಪರಿಶೀಲಿಸಿ ಉಲ್ಲೇಖ(2)ರಲ್ಲಿ ವರದಿ ನೀಡಿರುತ್ತಾರೆ.

ಮೆ॥ ಯಶಸ್ವಿನಿ ಗ್ಯಾಸ್ ಏಜೆನ್ಸಿ (ಐ.ಓ.ಸಿ) ನಂ.2, ಸುಬ್ರಮಣ್ಯ ಟೆಂಪಲ್ ಕಾಂಪ್ಲೆಕ್ಸ್, ಸರಸ್ವತಿ ಪುರಂ ಮುಖ್ಯರಸ್ತೆ, ಮಹಾಲಕ್ಷ್ಮಿ ಪುರಂ, ಬೆಂಗಳೂರು ವಿಳಾಸದಲ್ಲಿರುತ್ತ ದೆ. ಸದರಿ ಏಜೆನ್ಸಿಯ ಗೋದಾಮು ಫ್ಲಾಟ್ ನಂ. 138, ಬ್ಲಾಕ್ ನಂ. 137, ಜಾರಕ್ ಬಂಡೆ ಗ್ರಾಮ, ಯಲಹಂಕ ಹೋಬಳಿ, ಬೆಂಗಳೂರು ನಗರ ಜಿಲ್ಲೆ ವಿಳಾಸದಲ್ಲಿರುತ್ತದೆ. ಈ ವಿಳಾಸವು ನಂದಿನಿ ಬಡಾವಣೆ ಪರಿಮಳನಗರ ವ್ಯಾಪ್ತಿಯಲ್ಲಿ ಬರುತ್ತದೆ. ಪರಿಶೀಲನೆ ಸಮಯದಲ್ಲಿ ಹಾಜರಿದ್ದ, ಸಾರ್ವಜನಿಕರನ್ನು ಪರಿಶೀಲಿಸಲಾಗಿ ಇವರು ನೀಡಿರುವ ಮಹಜರ್‌ನಂತೆ ಮೆ॥ ಯಶಸ್ವಿನಿ ಗ್ಯಾಸ್ ಏಜೆನ್ಸಿ ಗೋದಾಮು ಜನನಿಬೀಡ ಪ್ರದೇಶದಲ್ಲಿದ್ದು, ಗೋದಾಮಿಗೆ ಹೊಂದಿಕೊಂಡಂತೆ ಮನೆಗಳಿರುತ್ತವೆ. ಗೋದಾಮಿನ ಸುತ್ತಮುತ್ತಲು ವಾಸದ ಮನೆಗಳೇ ಇರುತ್ತದೆ. ಇಲ್ಲಿ ಪ್ರತಿ ದಿನ ಏಜೆನ್ಸಿಯವರು ಗ್ಯಾಸ್ ಸಿಲಿಂಡರ್‌ಗಳನ್ನು ಲೋಡ್ ಮತ್ತು ಅನ್‌ಲೋಡ್ ಮಾಡುವಾಗ ಸಾಕಷ್ಟು ಶಬ್ಧ ಮಾಲಿನ್ಯ ಉಂಟಾಗಿ ಅಕ್ಕ-ಪಕ್ಕದವರಿಗೆ ಕಿರಿಕಿರಿ ಉಂಟಾಗಿರುತ್ತದೆ. ಗ್ಯಾಸ್ ಸಿಲಿಂಡರ್ ಹೊತ್ತು ತರುವ ಲಾರಿಗಳು ಮತ್ತು ಗ್ಯಾಸ್ ಪೂರೈಕೆ ಮಾಡುವ ಆಟೋಗಳು ಕೆಲವು ಸಲ ರಸ್ತೆಯಲ್ಲಿ-ಇರುವುದರಿಂದ ಟ್ರಾಫಿಕ್ ಜಾಮ್ ಉಂಟಾಗುತ್ತದೆ. ಒಟ್ಟಾರೆ ಜನನಿಬೀಡ ಪ್ರದೇಶದಲ್ಲಿ ಗ್ಯಾಸ್ ಏಜೆನ್ಸಿ ಗೋದಾಮು ಇರುವುದು ಕಾನೂನು ಬಾಹಿರವಾಗಿರುತ್ತದೆ. ಆದ್ದರಿಂದ ಗ್ಯಾಸ್ ಏಜೆನ್ಸಿಯ ಗೋದಾಮನ್ನು ಬೇರೆ ಕಡೆಗೆ ವರ್ಗಾಹಿಸಲು ತಿಳಿಸಿ ಸಾರ್ವಜನಿಕರ ಹೇಳಿಕೆ ನೀಡಿರುತ್ತಾರೆಂದು ವರದಿ ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಪರಿಶೀಲಿಸಲಾಗಿ, ಅಗತ್ಯವಸ್ತುಗಳ ಕಾಯ್ದೆ 1955ರ ಎಲ್‌ಪಿಜಿ ಆದೇಶ **2000**ರ ನಿಯಮ ಮತ್ತು ಷರತ್ತುಗಳನ್ನು ಉಲ್ಲಂಘಿಸಿರುವುದು ಕಂಡುಬಂದಿರುತ್ತದೆ. ಜನವಸತಿ ಪ್ರದೇಶದಲ್ಲಿ ಸಿಲಿಂಡರ್ ದಾಸ್ತಾನು ಮಾಡುವುದು ಸೂಕ್ತ ವಾಗಿರುವುದಿಲ್ಲ. ಒಂದು ವೇಳೆ ಸಿಲಿಂಡರ್ ಸೋರಿಕೆಯಾಗಿ ಅಗ್ನಿ ದುರಂತವಾದರೆ ಭಾರಿ ಅನಾಹುತವಾಗುತ್ತದೆ. ಆದ್ದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ, ಸುರಕ್ಷತೆ ಹಿತದೃಷ್ಟಿಯಿಂದ ಗೋದಾಮನ್ನು ಬೇರೆ ಕಡೆಗೆ ವರ್ಗಾಹಿಸುವುದು ಸೂಕ್ತವೆಂದು ಅಭಿಪ್ರಾಯಿಸುತ್ತಾ, ಸಾರ್ವಜನಿಕರ ಮನವಿ ಪತ್ರ ಮತ್ತು ಆಹಾರ ನಿರೀಕ್ಷಕರ ವರದಿಯನ್ನು ಇದರೊಂದಿಗೆ ಲಗತ್ತಿಸಿ, ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಉಪ ನಿರ್ದೇಶಕರು,
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ,
ಪಶ್ಚಿಮ ವಲಯ, ಬೆಂಗಳೂರು.

ಪ್ರತಿಯನ್ನು:

ECQ 1823 (49)

ಕರ್ನಾಟಕ ಸರ್ಕಾರ

**ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು**

**(ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ)**

ಇ-ಮೇಲ್ : aharabud@gmail.com ದೂರವಾಣಿ ಸಂಖ್ಯೆ:080-22215594

…(ನ)ಆ:ಎಲ್‌ಸಿಕ್ಯೂ:2998:12:2017-18 ದಿನಾಂಕ:14/08/2017

… ಪುಟಗಳು 02/01/18

ಗೆ,

ಆಯುಕ್ತರು,
ಬೆಂಗಳೂರು ನಗರ ಪೊಲೀಸ್,
ಇನ್‌ಫೆಂಟ್ರಿ ರಸ್ತೆ, ಬೆಂಗಳೂರು.

ಮಾನ್ಯರೇ,

ವಿಷಯ: ಮೆ॥ ಯಶಸ್ವಿನಿ ಗ್ಯಾಸ್ ಏಜೆನ್ಸಿ, ಮಹಾಲಕ್ಷ್ಮಿಪುರಂ, ಬೆಂಗಳೂರು ಗೋದಾಮು ಜನವಸತಿ ಪ್ರದೇಶದಲ್ಲಿರುವುದರಿಂದ ಸ್ಥಳಾಂತರಿಸುವ ಕುರಿತು.

ಉಲ್ಲೇಖ:
1) ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2998.
2) ಮಾನ್ಯ ಅಪರ ನಿರ್ದೇಶಕರು(ಸಂ.ವಿ), ಆನಾಸ & ಗ್ರಾವ್ಯ ಇಲಾಖೆ, ಬೆಂಗಳೂರು ರವರ ಕಛೇರಿ ಇ-ಮೇಲ್ ಸಂದೇಶ ದಿನಾಂಕ:29/06/2017.
3) ಈ ಕಛೇರಿ ಸಮಸಂಖ್ಯೆ ಪತ್ರ ದಿನಾಂಕ: 30/06/2017.

********

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1) ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:2998 ರನ್ವಯ ಮೆ॥ ಯಶಸ್ವಿನಿ ಗ್ಯಾಸ್ (ಐಓಸಿ) ಏಜೆನ್ಸಿಯು ಜನನಿಬಿಡ ಪ್ರದೇಶದಲ್ಲಿದ್ದು, ಬೆಂಕಿ ಅವಘಡಗಳು ಸಂಭವಿಸುವ ಕಾರಣದಿಂದ ಸದರಿ ಗೋದಾಮನ್ನು ಸ್ಥಳಾಂತರಿಸುವ ಕುರಿತು ಪ್ರಸ್ತಾಪಿಸಲಾಗಿರುತ್ತದೆ. ಅದರಂತೆ ಉಲ್ಲೇಖ(2)ರ ವರದಿಯನುಸಾರ ಮೇ॥ ಯಶಸ್ವಿನಿ ಗ್ಯಾಸ್ ಏಜೆನ್ಸಿ, ಮಹಾಲಕ್ಷ್ಮಿಪುರಂ, ಬೆಂಗಳೂರು ಗೋದಾಮನ್ನು ಸ್ಥಳಾಂತರಿಸುವ ಕುರಿತು ಸೂಕ್ತ ಕ್ರಮ ಕೈಗೊಳ್ಳಲು ಉಲ್ಲೇಖ(3)ರಲ್ಲಿ ತಹಶೀಲ್ದಾರ್, ಬೆಂಗಳೂರು ಉತ್ತರ ತಾಲ್ಲೂಕು ಇವರಿಗೆ ನಿರ್ದೇಶನ ನೀಡಲಾಗಿರುತ್ತದೆ.

ಮೆ॥ ಯಶಸ್ವಿನಿ ಗ್ಯಾಸ್ (ಐಓಸಿ) ಏಜೆನ್ಸಿ, ನಂ.2, ಸುಬ್ರಮಣ್ಯಪುರ ಟೆಂಪಲ್ ಕಾಂಪ್ಲೆಕ್ಸ್, ಸರಸ್ವತಿಪುರಂ ಮುಖ್ಯ ರಸ್ತೆ, ಮಹಾಲಕ್ಷ್ಮೀಪುರಂ, ಬೆಂಗಳೂರು ವಿಳಾಸದಲ್ಲಿದ್ದು, ಜನನಿಬಿಡ ಪ್ರದೇಶದಲ್ಲಿದ್ದು, ಗೋದಾಮಿಗೆ ಹೊಂದಿಕೊಂಡಂತೆ ವಾಸದ ಮನೆಗಳಿರುತ್ತವೆ. ಒಂದು ವೇಳೆ ಸಿಲಿಂಡರ್ ಸೋರಿಕೆಯಾಗಿ ಅಗ್ನಿ ದುರಂತವಾದರೆ ಭಾರಿ ಅನಾಹುತವಾಗುವ ಸಂಭವವಿರುತ್ತದೆ. ಅಗತ್ಯ ವಸ್ತುಗಳ ನಿಯಂತ್ರಣ ಕಾಯ್ದೆ 1955ರ ಎಲ್‌ಪಿಜಿ ಆದೇಶ 2000 ರ ನಿಯಮ ಮತ್ತು ಷರತ್ತುಗಳ ಉಲ್ಲಂಘನೆಯಾಗಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಮತ್ತು ಸುರಕ್ಷತೆಯ ದೃಷ್ಟಿಯಿಂದ ಸದರಿ ಗ್ಯಾಸ್ ಗೋದಾಮನ್ನು ಶೀಘ್ರವಾಗಿ ಸ್ಥಳಾಂತರಿಸಲು ಸೂಕ್ತ ಕ್ರಮ ವಹಿಸಲು ಕೋರಿದೆ.

ತಮ್ಮ ವಿಶ್ವಾಸಿ,

(ಸಹಿ)

ಜಿಲ್ಲಾಧಿಕಾರಿಗಳು,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.